


# ಕನ್ನಡ ರಾಜ್ಯೋತ್ಸವ ಕೊಡುಗೆ
## ಹೊಸ ಮನರಂಜನಾ ವಾಹಿನಿ
# ಕಲ್ಕಿ ಕನ್ನಡ

ಕನ್ನಡ ರಾಜ್ಯೋತ್ಸವಕ್ಕೆ ಮತ್ತೊಂದು ಮನರಂಜನಾ ವಾಹಿನಿ ಕಲ್ಕಿ ಕನ್ನಡ ಸೇರ್ಪಡೆಯಾಗಿದೆ. ಬದಲಾಗುತ್ತಿರುವ ಜನರ ಅಭಿರುಚಿ, ಕಲೆ, ಸಂಸ್ಕೃತಿ ಹಾಗು ಕನ್ನಡಿಗರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಹೆಮ್ಮೆಯ ಕೊಡುಗೆ 'ಕಲ್ಕಿ ಕನ್ನಡ' ಫುಲ್ ಮನರಂಜನಾ ವಾಹಿನಿ.



ಮಾಧ್ಯಮ ಎಂದ ತಕ್ಷಣ ಎಲ್ಲರೂ ಯೋಚಿಸೋದು ಹೊಸತನ...ಹೊಸ ಯೋಚನೆ ಹಾಗೂ ವಿಭಿನ್ನ ಮನರಂಜನೆ. ಇಂತಹ ಒಂದು ಮನರಂಜನೆ ಕಾರ್ಯಕ್ರಮಗಳನ್ನು ವಿಕ್ಷಕರಿಗೆ ನೀಡುವುದು ಮುಖ್ಯ ಗುರಿಯಾಗಿದೆ



ಎನ್ನುತ್ತಾರೆ ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಸಂಸ್ಥೆಯ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಪಿ ಕೈಲಾಸಂರವರು. ಈಗಾಗಲೇ ಕರ್ನಾಟಕದಲ್ಲಿ ಸಾಕಷ್ಟು ಮನರಂಜನೆ ವಾಹಿನಿಗಳು ಇದ್ದು ದೊಡ್ಡ ಮಟ್ಟದ ಸ್ಪರ್ಧೆಯನ್ನು ನೀಡುತ್ತಿವೆ. ಇಂತಹ ಒಂದು ಸ್ಪರ್ಧೆಗೆ ಸ್ಪರ್ಧಿಯಾಗಿ ಸಿದ್ಧವಾಗಿದೆ 'ಕಲ್ಕಿ ಕನ್ನಡ'. ಇಲ್ಲಿ ಹೊಸ ತಂತ್ರಜ್ಞಾನಗಳಿಂದ ಕೂಡಿದ ಉಪಕರಣಗಳು, ಕರ್ನಾಟಕದ ಕಿರುತೆರೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಹೆಚ್.ಡಿ ಕ್ವಾಲಿಟಿವುಳ್ಳ ಮನರಂಜನೆಯ ಕಾರ್ಯಕ್ರಮಗಳನ್ನು ಕಿರುತೆರೆಯ ಮೇಲೆ ತರುತ್ತಿದೆ. ಕಳೆದ 3–4 ತಿಂಗಳಿನಿಂದ ಸಂಪೂರ್ಣ ಸಿದ್ಧತೆಯೊಂದಿಗೆ ಅಂದರೆ ವೀಕ್ಷಕರ ನಾಡಿಮಿಡಿತವನ್ನು ಅರಿಯುವ ಸಲುವಾಗಿ ಎಲ್ಲ ಜಿಲ್ಲೆಗಳಲ್ಲಿ ಒಂದುತಂಡವನ್ನು ರಚಿಸಿ ಜನರು ಇಷ್ಟಪಡುವ ಕಾರ್ಯಕ್ರಮಗಳನ್ನು ನೀಡುವಚಿಂತನೆ ಜೊತೆಗೆ ಸ್ಪರ್ಧಾತ್ಮಕ ವಾಹಿನಿಗಳಿಗಿಂತಲೂ ವಿಭಿನ್ನ



ರೀತಿಯಲ್ಲಿ ನಮ್ಮ ಮನರಂಜನಾ ಕಾರ್ಯಕ್ರಮಗಳನ್ನು ಎಲ್ಲ ವರ್ಗದ ವೀಕ್ಷಕರಿಗೆ ನೀಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಕುಟುಂಬ ಸಮೇತರಾಗಿ ನೋಡುವಂತಹ ಅದ್ಧೂರಿತನದ ರಿಯಾಲಿಟಿ ಶೋಗಳು, ಮನಮಿಡಿಯುವ ಧಾರವಾಹಿಗಳು ನಿಮ್ಮ ಮನ ಮನೆಗೆ ಬರಲಿವೆ ಎಲ್ಲ ಕಾರ್ಯಕ್ರಮಗಳನ್ನು ನೋಡಿ ಕಲ್ಕಿ ಕನ್ನಡ ವಾಹಿನಿಯನ್ನು ಬೆಳೆಸಿ ಎನ್ನುತ್ತಾರೆ ವೈಟ್ ಹಾರ್ಸ್ ನೆಟ್‌ವರ್ಕ್ ಸಂಸ್ಥೆಯ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಪಿ ಕೈಲಾಸಂರವರು.

ವೀಕ್ಷಕರಿಗೆ ಹೊಚ್ಚ ಹೊಸತನ, ತಾಜಾತನ, ನಮ್ಮ ಕನ್ನಡತನದ ಸಂಸ್ಕೃತಿಯನ್ನು, ಉಳಿಸಿಕೊಂಡು ಮನರಂಜನೆಯ ರಸದೌತಣವನ್ನು ವೀಕ್ಷಕರ ಮನ ಮನೆಗೆ ನೀಡಲು ಸಜ್ಜಾಗಿದೆ 'ಕಲ್ಕಿ ಕನ್ನಡ'. ಧಾರ್ಮಿಕ, ಆಧ್ಯಾತ್ಮಿಕ, ಚಿಂತನೆಗಳೊಂದಿಗೆ ಭಗವಂತನ ದರ್ಶನ, ಭಾವನೆಗಳಿಗೆ ಜೀವತುಂಬುವ, ಕಲ್ಪನೆಗೂ ಮೀರಿದ ಕಥೆಗಳು/ಧಾರವಾಹಿಗಳು, ಹಾಗು ನಾನ್ ಫಿಕ್ಷನ್ ಅಂದ ತಕ್ಷಣ ನಮಗೆಲ್ಲ ನೆನಪಾಗೋದು ಅದ್ಧೂರಿ ಸೆಟ್, ಭರ್ಜರಿ ರಿಯಾಲಿಟಿ ಶೋಗಳು, ಅದರಲ್ಲಿ ಸಿಂಗಿಂಗ್, ಡ್ಯಾನ್ಸಿಂಗ, ಕಾಮಿಡಿ, ಹೀಗೆ ನಾನಾ ತರಹದ ರಿಯಾಲಿಟಿ ಶೋಗಳ ಮೂಲಕ ಹೊಸ ಪ್ರತಿಭೆಗಳನ್ನು ಹೆಕ್ಕಿತೆಗೆಯುವ ಒಂದು ವೇದಿಕೆ. ಕಿರುತೆರೆಯಲ್ಲಿ ಮೊಟ್ಟಮೊದಲ ಬಾರಿಗೆ "ಹರಕೆ" ಎಂಬ ಕಾರ್ಯಕ್ರಮ ಇಲ್ಲಿ ನೀವು ಹೊತ್ತಿರುವ ಹರಕೆಗೆ ಕಲ್ಕಿ ಕನ್ನಡ ವಾಹಿನಿಯಿಂದ ನೀವು ಇಚ್ಛಿಸುವ ದೇವಾಲಯಗಳಿಗೆ ಹೋಗಿ ನಿಮ್ಮ ಹರಕೆಯನ್ನು ಈಡೆರಿಸಿಕೊಡುತ್ತದೆ ಹರಕೆ. ಹೀಗೆ ಸಾಲು ಸಾಲಾಗಿ ವೀಕ್ಷಕರ ನಾಡಿಮಿಡಿತವನ್ನು ಅರಿತು ವೈವಿಧ್ಯಮಯ ಹಾಗೂ ಸ್ವಂತಿಕೆಯ ಮನರಂಜನೆಯ ಕಾರ್ಯಕ್ರಮಗಳನ್ನು ನೀಡುತ್ತೇವೆ ಎನ್ನುತ್ತಾರೆ ಕಾರ್ಯಕ್ರಮ ವಿಭಾಗದ ಮುಖ್ಯಸ್ಥರು ಬಾಲ್‌ರಾಜ್ ನಾಯ್ಡು. ■